

'ಜಯಹೇ ಕರ್ನಾಟಕ ಮಾತೆ' ಎಂಬುದೀಗ ಕೇವಲ ಕವಿ ಇಂಪಾಗಿಸುವ ಪದಪುಂಜಗಳಾಗಿ ಉಳಿದಿಲ್ಲ. ನಡೆ ಕನ್ನಡ, ನುಡಿ ಕನ್ನಡವನ್ನು ತಮ್ಮ ಜೀವನದ ಉಸಿರಾಗಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರದ ಅವಧಿಯಲ್ಲಿ ಇದು ಘಂಟಾಘೋಷವಾಗಿ ನಾಡಿನುದ್ದಕ್ಕೂ ಮೊಳಗುತ್ತಿದೆ. ಕನ್ನಡ ಭಾಷೆ, ಸಂಸ್ಕೃತಿ, ಕಲೆಗಳಿಗೆ ಹಿಂದೆಂದೂ ಸಿಗದಷ್ಟು ಆದ್ಯತೆ ನೀಡಿರುವ ಸಿದ್ದರಾಮಯ್ಯನವರು ತಮ್ಮದು ಅಚ್ಚ ಕನ್ನಡದ ಸರ್ಕಾರ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಆಡಳಿತ ವೈಖರಿ, ನೀತಿ ನಿರೂಪಣೆಗಳ ಮೂಲಕ ಕುವೆಂಪು ಕನಸು ಕಂಡಿದ್ದ 'ಸರ್ವ ಜನಾಂಗದ ಶಾಂತಿಯ ತೋಟ'ವನ್ನಾಗಿ ಕನ್ನಡ ನಾಡನ್ನು ಕಟ್ಟುವ ದಿಸೆಯಲ್ಲಿ ಅವರು ದಾಪುಗಾಲು ಇಡುತ್ತಿದ್ದಾರೆ. ಕನ್ನಡೋದ್ಧಾರ, ಸಂಸ್ಕೃತಿ ಕಟ್ಟುವಿಕೆಯ ಯಾವುದೇ ಪ್ರಸ್ತಾವನೆಯನ್ನೂ ಅವರು ವಾಪಸ್ ಕಳುಹಿಸಿದ್ದಿಲ್ಲ. ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರಪಟ್ಟ ಎಂಬುದನ್ನು ನಡೆ-ನುಡಿಯಲ್ಲಿ ತೋರಿಸಿದ ಸರ್ಕಾರ ಎಂದರೆ ಅದು ಸಿದ್ದರಾಮಯ್ಯ ಸರ್ಕಾರ.

1983ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸಿದ್ದರಾಮಯ್ಯ ಅವರು ವಿಧಾನಸಭೆಗೆ ಚುನಾಯಿತರಾದ ದಿನದಿಂದಲೇ ಕನ್ನಡ ಕಟ್ಟುವ ಕಾಯಕ ಮೊದಲಾಯಿತು. ಈಗ ಕನ್ನಡ ಅಭಿವೃದ್ಧಿ ಪ್ರಾಧಿಕಾರವಾಗಿ ರೂಪಾಂತರಗೊಂಡಿರುವ ಕನ್ನಡ ಕಾವಲು ಸಮಿತಿಯ ಮೊದಲ ಅಧ್ಯಕ್ಷರಾದ ದಿನದಿಂದಲೂ ಕನ್ನಡ ಎಂಬುದು ಅವರ ಸಂಗಡವೇ ಬಂದಿದೆ. ಭಾಷಾಭಿಮಾನ ಅವರು ರಾಜಕಾರಣಿಯಾದ ಮೇಲೆ ಬಂದಿದ್ದಲ್ಲ. ವಿದ್ಯಾರ್ಥಿ ದೆಸೆಯಲ್ಲಿ ಸಮಾಜವಾದಿ ಯುವ ಜನ ಸಭಾದಲ್ಲಿ ಗುರುತಿಸಿಕೊಂಡಿದ್ದ ಸಿದ್ದರಾಮಯ್ಯ, ಕನ್ನಡ ನಾಡು ಕಂಡ ಮೇಧಾವಿಗಳಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಕೆ. ರಾಮದಾಸ್, ದೇವನೂರು ಮಹಾದೇವ ಅವರ ಒಡನಾಟದಲ್ಲಿ ಬೆಳೆದವರು. ನಾಡು-ನುಡಿಯ ಬಗೆಗಿನ ಅವರಲ್ಲಿರುವ ಕಳಕಳಿ ಈ ಒಡನಾಟದಿಂದಲೇ ಹೆಚ್ಚು ಸ್ಫುಟಗೊಂಡಿತು.

## ಸರಸ್ವತಿ ಪುತ್ರರ ಮನೆಗೆ

ಮುಖ್ಯಮಂತ್ರಿಯಂತಹ ಅತ್ಯುನ್ನತ ಪದವಿ ಸಿಕ್ಕಿದಾಗ ಬಹುಸಂಖ್ಯಾತರು ಗುಡಿ-ಗುಂಡಾರಗಳನ್ನು ಸುತ್ತಿ ಹರಕೆ ತೀರಿಸುವುದು ಅನೂಚಾನವಾಗಿ ಬಂದ ಪದ್ಧತಿ. 2013ರಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದು, ಸಿದ್ದರಾಮಯ್ಯನವರು ಶಾಸಕಾಂಗ ಪಕ್ಷದ ನಾಯಕರಾಗಿ ಅರ್ಥಾತ್ ನಿಯೋಜಿತ ಮುಖ್ಯಮಂತ್ರಿಯಾದರು. ಮಾರ್ಗದರ್ಶನ ಕೋರಲು ಸೀದಾ ಅವರು ನಡೆದಿದ್ದು ಸರಸ್ವತಿ ಪುತ್ರರ ಮನೆಗೆ. ಕನ್ನಡಿಗರ ಸಾಕ್ಷಿ ಪ್ರಜ್ಞೆಯಂತಿದ್ದ ಡಾ. ಯು.ಆರ್. ಅನಂತಮೂರ್ತಿ ಅವರನ್ನು ಮೊದಲಿಗೆ ಭೇಟಿಯಾದ ಸಿದ್ದರಾಮಯ್ಯ ಅವರಿಂದ ಹಿತನುಡಿಗಳನ್ನು ಪಡೆದರು. ಅದಾದ ಬಳಿಕ ಕವಿಗಳಾದ ಜಿ.ಎಸ್. ಶಿವರುದ್ರಪ್ಪ, ಚಂದ್ರಶೇಖರ ಕಂಬಾರ, ಕನ್ನಡದ ಕಟ್ಟಾಳು ಪಾಟೀಲ ಪುಟ್ಟಪ್ಪ, ಗೆಳೆಯ ದೇವನೂರು ಮಹಾದೇವ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ತಮ್ಮ ಮುಂದಿನ ಸರ್ಕಾರದ ನಡೆ ಹೇಗಿರಬೇಕು ಎಂಬ ಬಗ್ಗೆ ಅವರಿಂದ ಉಪಯುಕ್ತ ಸಲಹೆಗಳನ್ನೂ ಆಲಿಸಿದರು. ಅದನ್ನು ಮುಂದಿನ ದಿನಗಳಲ್ಲಿ ಪಾಲಿಸಿದರು.

ಕನ್ನಡದ ಕೆಲಸವನ್ನು ಕಳೆದ ನಾಲ್ಕೂವರೆ ವರ್ಷಗಳಲ್ಲಿ ಇಷ್ಟು ಅರ್ಥಪೂರ್ಣವಾಗಿ ನಡೆಸುವ ಸಿದ್ದರಾಮಯ್ಯ ಸಂಕಲ್ಪ ಬಲ ಅಂದೇ ನಿಶ್ಚಯವಾಗಿಬಿಟ್ಟಿತ್ತು. ಅದೀಗ ಸಾಕಾರಗೊಂಡಿದೆ.

## ಕನ್ನಡ ಕಟ್ಟಿದ ಬಗೆ

ಹಿಂದಿನ ಸರ್ಕಾರಗಳ ಅವಧಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊಣೆಯನ್ನು ಯಾರಿಗೆ ಬೇಕಾದರೂ ನೀಡಲಾಗುತ್ತಿತ್ತು. ಸಾಹಿತ್ಯ, ಸಂಗೀತ, ರಂಗಭೂಮಿಯಲ್ಲಿ ಅಪಾರ ಜ್ಞಾನ ಹೊಂದಿದ್ದ, ಸ್ವತಃ ನಾಟಕವನ್ನು ಅಭಿನಯಿಸುತ್ತಿದ್ದ ಎಂ.ಪಿ. ಪ್ರಕಾಶ್ ಅಂತಹ ಕೆಲವರನ್ನು ಬಿಟ್ಟರೆ ಈ ಇಲಾಖೆಯನ್ನು ಸ್ವತಃ ಕಲಾವಿದರೊಬ್ಬರು

## ಕನ್ನಡದ ಮುಖ್ಯಮಂತ್ರಿ

ಮುಖ್ಯಮಂತ್ರಿಯಾದ ದಿನವೇ 'ಆಡಳಿತವೆಲ್ಲ ಕನ್ನಡದಲ್ಲಿ, ಕನ್ನಡದಲ್ಲಿ ಕಳುಹಿಸಿದ ಕಡತಗಳನ್ನು ಮಾತ್ರ ನೋಡುತ್ತೇನೆ. ಇಲ್ಲದಿದ್ದರೆ ವಾಪಸ್ ಕಳುಹಿಸುತ್ತೇನೆ' ಎಂದು ಸಿದ್ದರಾಮಯ್ಯನವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದರು. ಅದನ್ನು ಇಂದಿಗೂ ಪಾಲಿಸುತ್ತಿದ್ದಾರೆ. ಅದು ಅವರ ಕನ್ನಡದ ಕಳಕಳಿಗೆ ದ್ಯೋತಕ.

ಸಂಸ್ಕೃತಿ ಮಾತ್ರವಲ್ಲದೇ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿಯೂ ಅವರು ಆದೇಶ ಹೊರಡಿಸಿದ್ದಾರೆ. ಖಾಸಗಿ ಉದ್ಯಮ ಸಂಸ್ಥೆಗಳ ಸಿ ಮತ್ತು ಡಿ ಸಮೂಹದ ನೌಕರಿಯಲ್ಲಿ ನೂರಕ್ಕೆ ನೂರರಷ್ಟು ಕನ್ನಡಿಗರಿಗೆ ಪ್ರಾತಿನಿಧ್ಯ ನೀಡಬೇಕು ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಅವರ ಹೆಗ್ಗಳಿಕೆ.

ಇದರ ಜತೆಗೆ ಖಾಸಗಿ ಶಾಲೆಗಳಲ್ಲಿ, ಕಾನ್ವೆಂಟ್‌ಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಕಲಿಸಬೇಕು ಎಂದು ಆದೇಶ ಹೊರಡಿಸುವ ಪ್ರಕ್ರಿಯೆ ನಡೆದಿದೆ. ನ್ಯಾಯಾಲಯಗಳ ವಿರೋಧ ಬರುತ್ತದೆ ಎಂದು ಗೊತ್ತಿದ್ದರೂ ಅದನ್ನು ಮಾಡಲು ಮುಂದಾಗಿರುವುದು ಅವರ ಕಾಳಜಿಗೆ ಸಾಕ್ಷಿ.

